

ವಿಜಯ ಕುಮಾರಿ

# ನಾಯಿ ಶರಭನಾದ ಕಥೆ

■ **ವೇದಾವತಿ ಎಚ್.ಎಸ್.**

ಅಗ್ನಿಪ್ರಭ ಎಂಬ ಮುನಿಗಳು ಪ್ರಶಾಂತ ವಾತಾವರಣವಿದ್ದ ಒಂದು ಕುಟೀರದಲ್ಲಿ ವಾಸಿಸುತ್ತಿದ್ದರು. ಅವರ ತಪಸ್ಸಿನ ಪ್ರಭಾವದಿಂದ ಅಲ್ಲಿನ ಕಾಡುಮೃಗಗಳು ತಮ್ಮ ಶತ್ರುತ್ವವನ್ನು ಮರೆತು ಅವರೊಡನೆ ಸಂತೋಷದಿಂದ ಬಾಳುತ್ತಿದ್ದವು.

ಎಲ್ಲಾ ಪ್ರಾಣಿಗಳಂತೆ ನಾಯಿಯೂ ಅಲ್ಲಿ ವಾಸವಾಗಿತ್ತು. ಹೀಗಿರುವಾಗ ನಾಯಿಯು ಕಾಡಿನ ಮಧ್ಯಕ್ಕೆ ಪ್ರವೇಶ ಮಾಡಿತು. ಅಲ್ಲಿ ಚಿರತೆಯೊಂದು ಈ ನಾಯಿಯನ್ನು ನೋಡಿ ಅದನ್ನು ಹಿಡಿದು ತಿನ್ನಲು ಓಡಿಸಿಕೊಂಡು ಬಂದಿತು. ನಾಯಿಯು ಜೀವಭಯದಿಂದ ಅತ್ತಿತ್ತ ಓಡಿ ಕೊನೆಗೆ ಋಷಿಗಳಿದ್ದ ಕುಟೀರಕ್ಕೆ ಬಂದು ತಲುಪಿತು.

‘ದಯವಿಟ್ಟು ನನ್ನನ್ನು ಕಾಪಾಡಿ, ಚಿರತೆಯೊಂದು ನನ್ನನ್ನು ಅಟ್ಟಿಸಿಕೊಂಡು ಬರುತ್ತಿದೆ’ ಎಂದು ಋಷಿಯಲ್ಲಿ ನಾಯಿಯು ಜೀವಭಯದಿಂದ ತನ್ನನ್ನು ಕಾಪಾಡುವಂತೆ ಕೋರಿತು.

ಆ ಮುನಿಗೆ ನಾಯಿಯ ಮೇಲೆ ಕರುಣೆ ಹುಟ್ಟಿತು. ಋಷಿಯು ತನ್ನ ಕಮಂಡಲದಿಂದ ನಾಯಿಯ ಮೇಲೆ ಸ್ವಲ್ಪ ನೀರನ್ನು ಚಿಮುಕಿಸಿ ಯಾವುದೋ ಮಂತ್ರವೊಂದನ್ನು ಹೇಳಿದನು. ಆ ಮಂತ್ರದ ಮಹಿಮೆಯಿಂದ ತಕ್ಷಣ ನಾಯಿಯು ಚಿರತೆಯಾಗಿ ಮಾರ್ಪಟ್ಟಿತು.

ಋಷಿಯು ನಾಯಿಯಲ್ಲಿ ‘ಓ ನಾಯಿಯೇ,ಇನ್ನು ಮುಂದೆ ನೀನು ಯಾರಿಗೂ ಭಯಪಡಬೇಕಾಗಿಲ್ಲ’ ಎಂದನು. ನಾಯಿ ಚಿರತೆಯಾಗಿ ಬದಲಾದುದನ್ನು ನೋಡಿ ಅದನ್ನು ಅಟ್ಟಿಸಿಕೊಂಡು ಬಂದ ಚಿರತೆ ಆಶ್ಚರ್ಯಪಟ್ಟು ಹಿಂತಿರುಗಿ ಹೊರಟು ಹೋಯಿತು.

ಕೆಲವು ದಿನಗಳ ಕಾಲ ಚಿರತೆಯ ರೂಪದಲ್ಲಿದ್ದ ನಾಯಿಯು ಕಾಡಿನಲ್ಲೆಲ್ಲ ನಿರ್ಭಯವಾಗಿ ಓಡಾಡಲಾರಂಭಿಸಿತು. ಆದರೆ ಒಂದು ದಿನ ಅದನ್ನು ಹುಲಿಯೊಂದು ಅಟ್ಟಿಸಿಕೊಂಡು ಬಂದಿತು. ಮತ್ತೆ ಪ್ರಾಣ ಭಯದಿಂದ ಚಿರತೆ ವೇಷದಲ್ಲಿದ್ದ ನಾಯಿಗೆ ಭಯವಾಗಲು ಅದು ಋಷಿಯ ಹತ್ತಿರ ಓಡಿ ಬಂದು ಆಶ್ರಯ ಬೇಡಿತು.

ಆಗ ಋಷಿಯು ನಾಯಿಗೆ ‘ಯಾಕೆ ಭಯಪಡುವೆ?’ ಎಂದು ಪ್ರಶ್ನಿಸಿದನು.

ಅದಕ್ಕೆ ನಾಯಿ ‘ಋಷಿಗಳೇ, ಹುಲಿಯೊಂದು ನನ್ನನ್ನು ತಿನ್ನಲು ಬರುತ್ತಿದೆ. ದಯವಿಟ್ಟು ಕಾಪಾಡಿ’ ಎಂದಿತು.

‘ಹೆದರಬೇಡ, ನಿನ್ನನ್ನು ಒಂದು ಹುಲಿಯನ್ನಾಗಿ ಮಾರ್ಪಡಿಸುತ್ತೇನೆ’ ಎಂದನು ಋಷಿ.

ಅಂತೆಯೇ ಚಿರತೆಯಂತಿದ್ದ ನಾಯಿ ಹುಲಿಯಾಗಿ ಕಾಡಿನಲ್ಲಿ ಸುತ್ತಲು ಆರಂಭ ಮಾಡಿತು.

ಹೀಗೆಯೇ ದಿನಗಳು ಕಳೆದವು. ಒಮ್ಮೆ ಆನೆಯೊಂದು ಹುಲಿ ವೇಷದಲ್ಲಿದ್ದ ನಾಯಿಯನ್ನು ಕಂಡು ಅಟ್ಟಿಸಿಕೊಂಡು ಬಂದಿತು.

‘ಋಷಿಗಳೇ, ದಯವಿಟ್ಟು ಮತ್ತೆ ನನ್ನನ್ನು ಕಾಪಾಡಿ. ಆನೆಯೊಂದು ನನ್ನನ್ನು ಕೊಲ್ಲಲು ಆನೆ ಬರುತ್ತಿದೆ’ ಎಂದಿತು.

ಆಗ ಋಷಿಯು ‘ಮಗು, ಭಯಪಡಬೇಡ. ನನ್ನಲ್ಲಿರುವ ಶಕ್ತಿಯನ್ನು ಉಪಯೋಗಿಸಿ ಆನೆಯನ್ನಾಗಿ ಮಾರ್ಪಡಿಸುತ್ತೇನೆ’ ಎಂದನು.

ಋಷಿಯು ಹುಲಿಯಾಗಿದ್ದ ನಾಯಿಯನ್ನು ಆನೆಯಾಗಿ ಬದಲಾಯಿಸಿದ ನಂತರ ಇನ್ನೊಂದು ದಿನ ಮತ್ತೆ ಅದನ್ನು ಸಿಂಹವೊಂದು ಅಟ್ಟಿಸಿಕೊಂಡು ಬಂದಿತು. ಆಗ ಅದನ್ನು ಸಿಂಹವನ್ನಾಗಿ ಋಷಿಯು ಪರಿವರ್ತನೆ ಮಾಡಿದನು. ಈಗ ಸಿಂಹ ಸ್ವೇಚ್ಛೆಯಿಂದ ಕಾಡಿನಲ್ಲಿ ಸುತ್ತುತ್ತಿರಲು ಶರಭವೊಂದು ಅದನ್ನು ಹಿಡಿಯಲು ಬಂದಿತು. ಮತ್ತೆ ಅದು ಋಷಿಯ ಬಳಿಗೆ ಓಡಿ ಬಂದಿತು.

ಆಗ ಋಷಿಯು ‘ಸರಿ, ನೀನೂ ಶರಭನಾಗು’ಎಂದನು.

ಈಗ ನಾಯಿಯಾಗಿದ್ದ ಶರಭ, ನಿಜವಾದ ಶರಭವನ್ನು ಅಟ್ಟಿಸಿಕೊಂಡು ಹೋಯಿತು. ಅದು ಹೆದರಿ ಕಾಡಿನ ಕಡೆಗೆ ಓಡಿತು.

ತನ್ನ ಶಕ್ತಿಯನ್ನು ಕಂಡ ನಾಯಿಯ ರೂಪದಲ್ಲಿದ್ದ ಶರಭಕ್ಕೆ ಗರ್ವ ಬಂದಿತು. ಇಡೀ ಪ್ರಪಂಚದಲ್ಲಿ ಯಾರೂ ನನ್ನನ್ನು ಮೀರಿಸುವರು ಇಲ್ಲವೆಂದು ಯೋಚಿಸಿತು. ಜೊತೆಗೆ ಕೆಟ್ಟ ಆಲೋಚನೆಯೊಂದು ಅದಕ್ಕೆ ಬಂದಿತು.

‘ನಾನು ಈಗ ಕಾಡಿಗೆ ರಾಜ. ಈ ಕಾಡಿನಲ್ಲಿರುವ ಎಲ್ಲಾ ಮೃಗಗಳೂ ನನಗೆ ಭಯದಿಂದ ಗೌರವ ಸಲ್ಲಿಸಬೇಕು. ಆದರೆ, ಈ ಋಷಿಯು ನನಗಿಂತ ಶಕ್ತಿಶಾಲಿಯಾಗಿರುವನು. ನನ್ನ ರೀತಿಯಲ್ಲಿ